# ಮುಗಿಲ ಬಂಡಿ

ಅಲ್ಲಿ ನೋಡಿ ಮುಗಿಲ ಬಂಡಿ
ಗಗನದತ್ತ ಹಾರಿದೆ
ಸುಖದ ಯಾನ ಸಾಗಲೆಂದು
ಜನತೆ ಶುಭವ ಕೋರಿದೆ

ಭೂಮಿಯಿಂದ ವೇಗವಾಗಿ
ಹಕ್ಕಿಯಂತೆ ಸಾಗಿದೆ
ವಿಶ್ವವೆಲ್ಲ ಸುತ್ತುವಂತ
ಜನರ ಆಸೆ ನೀಗಿದೆ

ನೀರು, ಇಂಧನ ಶಕ್ತಿಯಿಂದ
ಮುಗಿಲ ಬಂಡಿ  ಬೀಗಿದೆ
ಅಂಚೆ , ಸರಕು ಹೊತ್ತುಕೊಂಡು
ತಾಣದತ್ತ ಸಾಗಿದೆ

ವಿವಿಧ ದೇಶ ಯಾನದಿಂದ
ಮನಕೆ ತೃಪ್ತಿ ನೀಡಿದೆ
ನಮ್ಮ ಸೃಷ್ಟಿ ಸೊಬಗನೆಲ್ಲ
ಸವಿಯುವಂತೆ ಮಾಡಿದೆ

ಮಕ್ಕಳೆಲ್ಲ ನೋಡುತಿರಲು
ಹರುಷ ಬುಗ್ಗೆ ಚಿಮ್ಮಿದೆ
ಗಗನಯಾನ ಮಾಡುವಂಥ
ಆಸೆ ಮನದಿ ಹೊಮ್ಮಿದೆ

ಸದ್ದುಗೈವ ಮುಗಿಲ ಬಂಡಿ
ಬಾಣದಂತೆ ಸಾಗಿದೆ
ಜನರ ಸೇವೆ ಮಾಡುತಿರಲು
ಹರುಷದಿಂದ ಬೀಗಿದೆ

**-ಎಂ.ಎಂ.ಸಂಗಣ್ಣವರ**



# ಬಾಲದ ಹಕ್ಕಿ



ಬಾಲದ ಹಕ್ಕಿ ಬಣ್ಣದ ಹಕ್ಕಿ
ಹಾರುತ ಬರುವ ಚೆಂದದ ಹಕ್ಕಿ
ಸುಂಯ್ಯನೆ ಬರುವ ಸುಂದರ ಹಕ್ಕಿ
ವಿಮಾನದಂತೆ ಕಾಣುವ ಹಕ್ಕಿ

ಕತ್ತಿನ ಸುತ್ತ ಕಪ್ಪನೆ ಬಣ್ಣ
ಮೈ ಸುತ್ತೆಲ್ಲಾ ಬೆಳ್ಳಿಯ ವರ್ಣ
ಪಿಳಿಪಿಳಿ ಬಿಡುವುದು ಹೊಳೆಯುವ ಕಣ್ಣ
ಹುಡುಕುತ ಬರುವುದು ತಿನ್ನಲು ಹಣ್ಣ

ನುಣ್ಣನೆ ಪುಕ್ಕದ ಚೆಲುವಿನ ಹಕ್ಕಿ
ಉದ್ದನೆ ಬಾಲದ ಅಂದದ ಹಕ್ಕಿ
ಆಡಲು ಕರೆದರೆ ಬಾರದ ಹಕ್ಕಿ
ಬಿಂಕವ ತೋರುವ ಜಂಭದ ಹಕ್ಕಿ

ಅತ್ತಿಂದಿತ್ತ ನೆಗೆಯುವ ಹಕ್ಕಿ
ಕಂದನ ಮುಖದೊಳು ನಗಿಸುವ ಹಕ್ಕಿ
ಮುಟ್ಟಲು ಹೋದರೆ ಸಿಗದೀ ಹಕ್ಕಿ
ಮುಗಿಲಿನ ಕಡೆಗೆ ಓಡುವ ಹಕ್ಕಿ

ಬಾಲದ ಹಕ್ಕಿ ಬಣ್ಣದ ಹಕ್ಕಿ
ಹಾರುತ ಬರುವ ಸುಂದರ ಹಕ್ಕಿ

**-ಕಲ್ಪನಾ ಪ್ರಭಾಕರ ಹೆಗಡೆ, ಸೋಮನಳ್ಳಿ**